ಸೃಜನಿ
SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 33-37
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ನಮ್ಮ ಕನ್ನಡ ಭಾಷೆಯ ಪ್ರಸ್ತುತ ಸ್ಥಿತಿಗತಿ

**ಪ್ರೊ. ಶ್ರೀನಿವಾಸ ಹೆಚ್.ಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು
ಕುಮಾರಸ್ವಾಮಿ ಬಡಾವಣೆ, ಬೆಂಗಳೂರು

***Abstract:***
*ಪ್ರಾಚೀನ ಪರಂಪರೆಯನ್ನು ಹೊಂದಿರುವ ಕನ್ನಡ ಭಾಷೆ ಇಂದಿನ ಕಾಲಘಟ್ಟದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ದಟ್ಟ ಪ್ರಭಾವ, ಕೈಗಾರಿಕೀಕರಣ, ಜಾಗತೀಕರಣ, ವಾಣಿಜ್ಯೀಕರಣ ಮುಂತಾದ ಪರಿವರ್ತನೆಗಳ ಹಿನ್ನೆಲೆಯಲ್ಲಿ ದೇಶಿಭಾಷೆಯಾದ ಕನ್ನಡವನ್ನು ಉಳಿಸಿ, ಕಾಲದ ಅಗತ್ಯಗಳಿಗೆ ಅನುಗುಣವಾಗಿ ಬಳಸುವುದು ಪ್ರಮುಖ ಸವಾಲಾಗಿ ಪರಿಣಮಿಸಿದೆ. ಕನ್ನಡವನ್ನು ಬೆಳೆಸುವ ಜವಾಬ್ದಾರಿ ಭವಿಷ್ಯತಲದ ಪೀಳಿಗೆಯ ಮೇಲಿರುವುದರಿಂದ, ಅವರು ಕನ್ನಡಕ್ಕೆ ಎದುರಾಗಿರುವ ವಿವಿಧ ಅಡಚಣೆಗಳನ್ನು ಅರಿತು, ಸೂಕ್ತ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಪ್ರಸ್ತುತ ಸ್ಥಿತಿಗತಿಗಳನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಕನ್ನಡ ಭಾಷೆ, ಸಾಹಿತ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಆಧುನಿಕ ಕನ್ನಡದ ಸ್ಥಿತಿಗತಿ.*

## ಪೀಠಿಕೆ

ಕನ್ನಡವನ್ನು 'ಆಧುನಿಕ ಕನ್ನಡ'ವೆಂದು ಕೆಲವು ಭಾಷಾಶಾಸ್ತ್ರಜ್ಞರು ಗುರುತಿಸಿರುವುದು ಗಮನಾರ್ಹ. ಕನ್ನಡವು ಭಾರತದ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ಒಂದಾಗಿ ಇಂದು ಗುರುತಿಸಲ್ಪಡುವುದಲ್ಲದೆ, ಸುಮಾರು 1,91,791 ಚದುರ ಕಿಲೋಮೀಟರ್ ವಿಸ್ತೀರ್ಣ ಹೊಂದಿರುವ ದೇಶದ ಎಂಟನೇ ಅತಿ ದೊಡ್ಡ ರಾಜ್ಯವಾದ ಕರ್ನಾಟಕದ ಅಧಿಕೃತ ಭಾಷೆಯೂ ಆಗಿದೆ. ಪ್ರಸ್ತುತ ಕರ್ನಾಟಕದಲ್ಲಿ ಸುಮಾರು 7.17 ಕೋಟಿ ಜನಸಂಖ್ಯೆ ವಾಸವಾಗಿದ್ದು, ಇವರಲ್ಲಿ ಸುಮಾರು 67 ಶೇಕಡಾ ಮಂದಿ ಕನ್ನಡ ಭಾಷಿಕರು ಎಂಬುದು ಅಂದಾಜಾಗಿದೆ.

ಭಾರತದ ಸಂವಿಧಾನವು ತನ್ನ 8ನೇ ಶೆಡ್ಯೂಲ್‌ನಲ್ಲಿ ಕನ್ನಡವನ್ನು ಅಧಿಕೃತ ಭಾಷೆಗಳ ಪಟ್ಟಿಯಲ್ಲಿ ಸೇರಿಸಿರುವುದು ಕನ್ನಡದ ಭಾಷಾತ್ಮಕ ಮಾನ್ಯತೆಯನ್ನು ಮತ್ತಷ್ಟು ಬಲಪಡಿಸಿದೆ. ಸಹಸ್ರಾರು ವರ್ಷಗಳಿಂದ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರಂಪರೆ ಶ್ರೀಮಂತವಾಗಿ ಬೆಳೆಯುತ್ತಾ ಬಂದಿದ್ದು, ಅದು ಇಂದಿಗೂ ಜೀವಂತವಾಗಿ ಮುಂದುವರಿಯುತ್ತಿರುವ ಮಹತ್ವದ ಸಾಂಸ್ಕೃತಿಕ ಶಕ್ತಿ ಆಗಿದೆ.

ಜಾಗತೀಕರಣ ಮತ್ತು ಖಾಸಗೀಕರಣವು ಸ್ಥಳೀಯ ಜೀವನಶೈಲಿ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪರಿಣಾಮಗಳು ಅತ್ಯಂತ ಗಂಭೀರವಾಗಿವೆ. ಈ ಬದಲಾವಣೆಗಳ ನೆರವಿನಲ್ಲಿ, ಸ್ಥಳೀಯ ಭಾಷೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಸವಾಲಿನ ಸಂಗತಿಯಾಗಿ ಪರಿಣಮಿಸಿದೆ. ಕನ್ನಡ ಭಾಷೆಯಲ್ಲಿ

***Please cite this article as:*** ಶ್ರೀನಿವಾಸ, ಹೆಚ್.ಪಿ. (2025). ನಮ್ಮ ಕನ್ನಡ ಭಾಷೆಯ ಪ್ರಸ್ತುತ ಸ್ಥಿತಿಗತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(5), 33–37

ವಿಷಯಕ್ಕೆ ಬಂದಾಗ, ಕನ್ನಡವನ್ನು ಸರ್ವಶ್ರೇಷ್ಠವಾಗಿ ತಿಳಿದಿರುವ ಕನ್ನಡಿಗರೇ ಅದನ್ನು ದೈನಂದಿನ ಬದುಕಿನಲ್ಲಿ ಸಮರ್ಪಕವಾಗಿ ಬಳಸುವುದಿಲ್ಲ ಎಂಬುದು ಶೋಚನೀಯ ಸಂಗತಿ. ಇಂದಿನ ಮಕ್ಕಳಿಗೆ ಕನ್ನಡವನ್ನು ಸರಿಯಾಗಿ ಓದು–ಬರೆಯಲು ತೊಂದರೆ ಉಂಟಾಗುತ್ತಿರುವುದು, ನಮ್ಮ ಭಾಷೆಯ ಮಹತ್ವವನ್ನು ಅರಿಯದಿರುವುದು ಮತ್ತು ಪರಭಾಷಾ ವ್ಯಾಮೋಹವನ್ನು ಅತಿಯಾಗಿ ಬೆಳೆಸಿರುವುದರಿಂದಾಗಿದೆ.

ಕನ್ನಡ ಭಾಷೆಯಲ್ಲಿ ಜಗತ್ತಿನ ಯಾವುದೇ ಶ್ರೇಷ್ಠ ಸಾಹಿತ್ಯಕೃತಿಗಳಿಗೆ ಸಮಾನವಾಗುವ ಮಟ್ಟದ ಕೃತಿಗಳು ರಚನೆಯಾಗಿವೆ ಮತ್ತು ಅವುಗಳಲ್ಲಿ ಅನೇಕವು ವಿಶ್ವದ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ. ಮೊಬೈಲ್, ಕಂಪ್ಯೂಟರ್, ಇಂಟರ್‌ನೆಟ್ ಮುಂತಾದ ಆಧುನಿಕ ತಾಂತ್ರಿಕ ಉಪಕರಣಗಳಲ್ಲಿಯೂ ಕನ್ನಡವನ್ನು ಬಳಸುವ ಅವಕಾಶಗಳು ಲಭ್ಯವಾಗಿವೆ; ಇದರಿಂದ ಕನ್ನಡ ತಂತ್ರಜ್ಞಾನ–ಸ್ನೇಹಿ ಭಾಷೆಯೆಂದು ಪರಿಗಣಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಇಂಗ್ಲಿಷ್ ಭಾಷೆಯ ಪ್ರಭಾವ ಅತಿಯಾದ ಮಟ್ಟಕ್ಕೆ ಏರಿರುವುದು ಸ್ಪಷ್ಟವಾಗಿದೆ. ಇತಿಹಾಸದಲ್ಲಿ ಅನ್ಯಭಾಷಿಕರು ನಮ್ಮ ಮೇಲೆ ಆಡಳಿತ ನಡೆಸಿದಾಗ, ಅವರು ಸಹಜವಾಗಿ ತಮ್ಮ ಆಡಳಿತ ಪದ್ಧತಿಗಳಲ್ಲಿ ಹಾಗೂ ದೈನಂದಿನ ವ್ಯವಹಾರಗಳಲ್ಲಿ ತಮ್ಮದೇ ಭಾಷೆಯನ್ನು ಉತ್ತೇಜಿಸಿದರು. ಅವರ ನಡೆ–ನುಡಿಗಳು ಮತ್ತು ಸಾಂಸ್ಕೃತಿಕ ಪ್ರಭಾವಗಳು ನಮ್ಮ ಸಮಾಜದ ಮೇಲೆ ಆಳವಾದ ಪರಿಣಾಮ ಬೀರಿದ್ದು, ಕನ್ನಡದ ನುಡಿ–ನುಡಿಗೆ ಮಸುಕಾಗುವ ಸ್ಥಿತಿ ಉಂಟಾಗಿದೆ. ಇದರ ಪರಿಣಾಮವಾಗಿ, ಕನ್ನಡದ ಸಾಂಪ್ರದಾಯಿಕ ಕೌಶಲ್ಯಗಳು, ಮೌಲ್ಯಗಳು ಮತ್ತು ನುಡಿಗಟ್ಟುಗಳು ಬದಿಗೊಳ್ಳುತ್ತಿದ್ದು, ಸ್ವ ಭಾಷೆಯ ಗುರುತಿನ ಸಂರಕ್ಷಣೆ ಪ್ರಮುಖ ಸವಾಲಾಗಿ ಪರಿಣಮಿಸಿದೆ.

ಆಳುವವರ ನಡೆ–ನುಡಿಗಳು ಬಳಕೆಗೆ ಬರುತ್ತಿದ್ದಂತೆ, ನಮ್ಮ ಸಾಂಪ್ರದಾಯಿಕ ನಡೆ–ನುಡಿಗಳು ಕ್ರಮೇಣ ಪ್ರಚಲಿತದಿಂದ ಹೊರಗಿಡಲ್ಪಡುವ ಸ್ಥಿತಿ ನಿರ್ಮಾಣವಾಗುತ್ತದೆ. ಇದಷ್ಟೇ ಅಲ್ಲ, ಪರಭಾಷೆಯ ಪದಗಳು ಸಾಮಾನ್ಯ ಜನರ ಬಾಯಲ್ಲಿ ಉಚ್ಚಾರಣೆಗೆಟ್ಟು, ತಮ್ಮ ಮೂಲ ಅರ್ಥವನ್ನು ಕಳೆದುಕೊಳ್ಳುವವೂ ಕಾಣಿಸುತ್ತದೆ. ಇಂತಹ ಪ್ರವೃತ್ತಿಗಳನ್ನು ಕನ್ನಡದ ಸನ್ನಿವೇಶಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ, ದಿಕ್ಕುಗಳನ್ನು ಸೂಚಿಸುವ 'ಮೂಡಣ', 'ಪಡುವಣ', 'ತೆಂಕಣ', 'ಬಡಗಣ' ಎಂಬ ನೈಸರ್ಗಿಕ ಕನ್ನಡ ನುಡಿಗಟ್ಟುಗಳ ಜಾಗದಲ್ಲಿ 'ಪೂರ್ವ', 'ಪಶ್ಚಿಮ', 'ಉತ್ತರ', 'ದಕ್ಷಿಣ' ಎಂಬ ಪರಭಾಷಾ ಪದಗಳು ವ್ಯಾಪಕವಾಗಿ ಬಳಕೆಗೆ ಬಂದಿದೆ; ಇದು ಕನ್ನಡದ ನೈಸರ್ಗಿಕ ಪರಂಪರೆ ಮಸುಕಾಗುತ್ತಿರುವುದಕ್ಕೆ ವಿಪರ್ಯಾಸಕರ ನಿದರ್ಶನವಾಗಿದೆ.

ಕನ್ನಡನಾಡಿನ ಸೃಜನಶೀಲರು ಹಾಗೂ ಆತ್ಮಾಭಿಮಾನಿಗಳು–ಕವಿ–ಲೇಖಕರು ಮಾತ್ರವಲ್ಲ, ವಿಜ್ಞಾನಿಗಳು, ಸಮಾಜ ಚಿಂತಕರು, ಅರ್ಥಶಾಸ್ತ್ರಜ್ಞರು, ರಾಜಕಾರಣಿಗಳು, ಯಂತ್ರಶಿಲ್ಪಿಗಳು, ಉದ್ಯಮಿಗಳು, ಕಾರ್ಮಿಕರು, ಶಿಕ್ಷಕರು–ಎಲ್ಲರೂ ತಮ್ಮ ಜ್ಞಾನಮಯ, ಸಂಶೋಧನಾತ್ಮಕ ಹಾಗೂ ಸೃಜನಾತ್ಮಕ ಕೃತಿಗಳನ್ನು ಸಾಧ್ಯವಾದಷ್ಟು ಕನ್ನಡದಲ್ಲೇ ಬರೆಯುವುದು ಅಗತ್ಯವಾಗಿದೆ. ಅನ್ಯಭಾಷಿಕರೊಂದಿಗೆ ವ್ಯವಹಾರ ಮಾಡುವ ಸಂದರ್ಭದಲ್ಲಿಯೂ, ಬಳಸುವ ಭಾಷೆಗಳಲ್ಲಿ ಕನ್ನಡವನ್ನು ಒಂದು ಮುಖ್ಯ ಭಾಷೆಯಾಗಿ ಕಡ್ಡಾಯವಾಗಿ ಉಪಯೋಗಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು.

ಆಧುನಿಕ ಕಾಲದಲ್ಲಿ ಕನ್ನಡ ಮಾತನಾಡುವವರ ಪ್ರಮಾಣದಲ್ಲಿ ಕಂಡುಬರುವ ಕುಸಿತದ ಪರಿಣಾಮವಾಗಿ, ಕನ್ನಡದಲ್ಲಿ ಬರೆಯುವ ಸಾಹಿತಿಗಳು ಮತ್ತು ಬರಹಗಾರರ ಸಂಖ್ಯೆಯೂ ಕ್ರಮೇಣ ಕಡಿಮೆಯಾಗುತ್ತಿರುವುದು ಗಂಭೀರ ಚಿಂತನೆಗೆ ಗ್ರಾಸವಾಗಿದೆ.

ಅಂಗಡಿ–ಮುಂಗಟ್ಟುಗಳ ಮತ್ತು ಹೋಟೆಲ್‌ಗಳ ಫಲಕಗಳಲ್ಲಿ ಕನ್ನಡ ಬಳಕೆ ಕಡ್ಡಾಯವಾಗಿರುವುದರೂ, ಶಾಲೆಗಳಲ್ಲಿ ಇಂಗ್ಲಿಷ್ ಮಾತನಾಡುವಿಕೆ ಸಾಮಾನ್ಯವಾಗಿರುವುದು–ಇವು ಎರಡೂ ಪರಭಾಷಾ ಪ್ರಭಾವಗಳ ಬೆನ್ನೇರಿ–ಕನ್ನಡ ಭಾಷೆ ಕ್ರಮೇಣ ಅವನತಿಯ ಅಂಚಿನತ್ತ ಸಾಗುತ್ತಿರುವುದನ್ನು ಸೂಚಿಸುತ್ತದೆ. ಇಂತಹ ಸ್ಥಿತಿ ಮುಂದುವರಿದರೆ, "ಕನ್ನಡ ಎಂದರೆ ಹೇಗಿತ್ತು?" ಎಂದು ಪ್ರಶ್ನಿಸುವ ಪೀಳಿಗೆಗಳು ಹೆಚ್ಚಾಗುವ ಸಾಧ್ಯತೆಯಿದೆ. ಈ ರೀತಿಯ ಪರಿಸ್ಥಿತಿ ಉಂಟಾಗದಂತೆ ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂತಾದ ಹಲವು ಸಂಸ್ಥೆಗಳು ಸ್ಥಾಪಿತಗೊಂಡಿವೆ.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಾತನಾಡುವ ಭಾಷಾ ವೈವಿಧ್ಯ ಗಮನಾರ್ಹವಾಗಿದೆ. ಅವುಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಮಾತನಾಡುವವರ ಪ್ರಮಾಣ ಅತ್ಯಧಿಕವಾಗಿರುವುದು ದಾಖಲಿಸಲಾಗಿದೆ. ಇತರ ಜಿಲ್ಲೆಗಳಲ್ಲಿ ಕೂಡ ಸಂಸ್ಕೃತನಿಷ್ಠ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ಅರೇಬಿಕ್ ಪ್ರಭಾವಿತ ಕನ್ನಡ ಮುಂತಾದ ವಿವಿಧ ಭಾಷಾ ರೂಪಗಳು ಕಂಡುಬರುತ್ತವೆ. ಒಟ್ಟಿನಲ್ಲಿ ರಾಜ್ಯದಲ್ಲಿ ಶುದ್ಧ ಕನ್ನಡ ಮಾತನಾಡುವವರ ಸಂಖ್ಯೆ ಕ್ರಮೇಣ ಕುಂಠಿತವಾಗುತ್ತಿರುವುದು ಆತಂಕಕಾರಿ. ಹಳೆಯ ಕಾಲದಲ್ಲಿ ಕನ್ನಡಕ್ಕೆ ದೊರೆಯುತ್ತಿದ್ದ ಗೌರವ ಇಂದಿನ ದಿನಗಳಲ್ಲಿ ಸಮರ್ಪಕವಾಗಿ ಮುಂದುವರಿಯುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ.

ಇಂದಿನ ಶಾಲೆಗಳಲ್ಲಿ ಕಡ್ಡಾಯವಾಗಿ ಇಂಗ್ಲಿಷ್ ಮಾತನಾಡಬೇಕು ಎಂದು ಒತ್ತಾಯಿಸುವವರ ನಿರ್ಧಾರವನ್ನು ಗಮನಿಸಿದಾಗ, ಭವಿಷ್ಯದಲ್ಲಿ ಕನ್ನಡ ಕಡ್ಡಾಯವಾಗಿ ಮಾತನಾಡಬಾರದು ಎಂಬ ನಿಲುವುಗಳು ಜಾರಿಗೆ ಬಂದರೂ ಅದು ಅಚ್ಚರಿಯ ವಿಷಯವಾಗಿರುವುದಿಲ್ಲ. ಹೈದರಾಬಾದ್ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಎಂ.ಆರ್. ಕೃಷ್ಣಶಾಸ್ತ್ರಿಗಳು ನೀಡಿದ ಎಚ್ಚರಿಕೆಯನ್ನು ಇಲ್ಲಿ ಸ್ಮರಿಸಬಹುದು. ಅವರು, "ಯಾವುದೇ ದುರ್ಘಟನೆಗಳಿಂದ ನಮ್ಮ ದೇಶದಲ್ಲಿ ಬೌದ್ಧಧರ್ಮ ಸಂಪೂರ್ಣ ನಾಶವಾದಂತೆ, ಸಂಸ್ಕೃತ ಭಾಷೆಯೂ ನಶಿಸಿಹೋದರೆ ಅದು ಹೊರದೇಶದಲ್ಲಿ ಬದುಕುಳಿಯಬಹುದು. ಆದರೆ ಕನ್ನಡ–ಕನ್ನಡಿಗರೇ, ನಿಮ್ಮ ಭಾಷೆಯನ್ನು ಭಾರತದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಜಾಗ ಬಿಟ್ಟರೆ ಮತ್ತೇ ಎಲ್ಲಿಯೂ ಕಾಣಲಾಗುವುದಿಲ್ಲ. ನೀವು ಕನ್ನಡವನ್ನು ಉಳಿಸಿಕೊಳ್ಳದಿದ್ದರೆ, ಇತರ ಯಾವ ದೇಶದ ಜನರೂ ಅದನ್ನು ಕಾಪಾಡುವುದಿಲ್ಲ" ಎಂದು ಸೂಚಿಸಿದ್ದರು. ಅವರು ಮತ್ತಷ್ಟು ತೀವ್ರವಾಗಿ ಸೂಚಿಸಿದ್ದು, "ಕನ್ನಡ ಹೋದರೆ ಹೋಗಲಿ ಎಂಬ ನಿರ್ಲಕ್ಷ್ಯವು ವಹಿಸಲ್ಪಟ್ಟರೆ, ಬಂಗಾಳಕೊಲ್ಲಿಯಿಂದ ಹಿಡಿದು ಅರಬ್ ಸಮುದ್ರವರೆಗೂ ಇರುವ ವ್ಯಾಪ್ತಿಯಲ್ಲಿಯೂ ಕನ್ನಡವನ್ನು ನಾಶಗೊಳಿಸಲು ಸಾಧ್ಯವಿದೆ; ಇದರಿಂದ ಇತರ ಭಾಷೆಗಳು ಇಲ್ಲಿ ಬಂದು ಆಕ್ರಮಿಸಿಕೊಳ್ಳುವ ಪರಿಸ್ಥಿತಿಯು ಸಹ ಉಂಟಾಗಬಹುದು" ಎಂದು ಅವರು ಹೇಳಿದರು. ಈ ಮಾತುಗಳು ಕನ್ನಡ ಭಾಷೆ ಎದುರಿಸುತ್ತಿರುವ ಅಸ್ತಿತ್ವದ ಹೋರಾಟವನ್ನು ಗಂಭೀರವಾಗಿ ಮನದಟ್ಟು ಮಾಡಿಸುತ್ತವೆ.

ಕನ್ನಡಿಗರು ಮೊದಲು ಕನ್ನಡಿಗರಾಗಿ ಗುರುತಿಸಿಕೊಂಡಿರಬೇಕು. ಇಂದಿನ ಕಾಲದಲ್ಲಿ ಬಹುತೇಕ ಯುವಕರ ಜೀವನದ ಅವಿಭಾಜ್ಯ ಅಂಗವಾಗಿ ಪರಿಣಮಿಸಿರುವ ಸಾಮಾಜಿಕ ಜಾಲತಾಣಗಳು ಮಾಹಿತಿ ಹಂಚಿಕೆ ಮತ್ತು ಅಭಿಪ್ರಾಯ ವಿನಿಮಯದ ವೇದಿಕೆಗಳಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗೆ ಪ್ರಮುಖ ಕಾರಣವಾಗಿದೆ. ಹಿಂದಿನ ಕಾಲದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಉದ್ಭವಿಸಿದ ಆತಂಕವು ಈಗ ತಗ್ಗಿರುವುದು ಗಮನಾರ್ಹ. ಆದರೆ, ಸಾಮಾಜಿಕ ಜಾಲತಾಣಗಳ ಸಂಪರ್ಕ ಕ್ರಾಂತಿಯು ಕನ್ನಡ ಭಾಷೆ ಮತ್ತು ಸಾಹಿತ್ಯದ ಪ್ರಸಾರಕ್ಕೆ ಬಹಳಷ್ಟು ಉಪಯೋಗವಾಗಿರುವುದನ್ನು ನೋಡಬಹುದು.

ಹಿಂದೆ, ಪತ್ರಿಕೆಗಳು, ನಿಯತಕಾಲಿಕೆಗಳು, ಸಾಂಸ್ಕೃತಿಕ ವೇದಿಕೆಗಳು, ಪ್ರಕಾಶನಗಳು ಮತ್ತು ಕೆಲವು ಬರಹಗಾರರ ಕೃತಿಗಳ ಹೊರತು, ಸಾಮಾನ್ಯ ಜನರಿಂದ ಸಾಹಿತ್ಯದ ಬಳಕೆ ಬಹಳ ಕಡಿಮೆಯಾಗಿತ್ತು. ಸಿನಿಮಾ ಜನಪ್ರಿಯತೆಗಿಂತಲೂ, ಸಾಹಿತ್ಯವು ಕೆಲವೇ ಜನರಿಗೆ ಆಸಕ್ತಿದಾಯಕ ಕ್ಷೇತ್ರವಾಗಿರುತ್ತಿತ್ತು.

ಸಾಮಾಜಿಕ ಜಾಲತಾಣಗಳಲ್ಲಿ ಸಾಮಾನ್ಯ ಜನರು ತಮ್ಮ ಭಾವನೆ ಅಭಿಪ್ರಾಯಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅದು ಕನ್ನಡದಲ್ಲಿಯೇ ವ್ಯಕ್ತಪಡಿಸುತ್ತಿದ್ದಾರೆ. ಕೆಲವು ಯುವ ಪ್ರತಿಭೆಗಳಂತೂ ಮೂಕವಿಸ್ಮಿತರಾಗುವಂತೆ ತಮ್ಮ ಬರಹಗಳನ್ನ ಮೂಡಿಸುತ್ತಿದ್ದಾರೆ. ಅವರ ಭಾಷೆ, ಕಲ್ಪನೆ, ನಿರೂಪಣೆಗೆ ಇಂದಿನ ಕನ್ನಡ ಸಾಹಿತ್ಯದ ಸ್ವರ್ಣಯುಗ ಮತ್ತೆ ಮರಳಿಸುತ್ತಿದೆಯೇನೋ ಎಂಬ ಭಾವನೆ ಉಂಟುಮಾಡುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ದೈನಿಕ ಜಗತ್ತಿನ ಅತಿ ಸಾಮಾನ್ಯ ವಿಷಯಗಳ ಕುರಿತು ಕನ್ನಡದಲ್ಲಿಯೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಸಾಹಿತ್ಯ ಮತ್ತು ವಿಚಾರ ಸಂಕಲನಗಳ ಹೊರತಾಗಿಯೂ, ಕನ್ನಡವನ್ನು ಅಂತರ್ಜಾಲ ವೇದಿಕೆಗಳಲ್ಲಿ ಬಳಸುವ ಚಟುವಟಿಕೆಗಳು ಪ್ರಾರಂಭವಾಗಿವೆ. ಈ ಮೂಲಕ ಮುಂದಿನ ತಲೆಮಾರಿಗೆ ಕನ್ನಡ ರಾಣಿ ಆಗಬಹುದೇನೋ ಎನ್ನುವ ಭಯ ಸಣ್ಣಗೆ ದೂರಾಗುತ್ತಿದೆ.

ಭಾರತದಲ್ಲಿ ಅಂತರ್ಜಾಲ ಬಳಕೆಯು ಹೆಚ್ಚಿದ ಮೊದಲ ದಿನಗಳಲ್ಲಿಯೇ ಕನ್ನಡವೂ ಇಂಟರ್‌ನೆಟ್‌ನಲ್ಲಿ ಪ್ರಚಲಿತವಾಗಿ ಬಳಕೆಗೊಳ್ಳಲು ಪ್ರಾರಂಭಿಸಿತು ಮತ್ತು ವೇಗವಾಗಿ ವಿಸ್ತಾರಗೊಂಡಿತು. ಕನ್ನಡ ಬ್ಲಾಗ್ ಗುಂಪುಗಳನ್ನು ರಚಿಸಿ, ಅಂತರ್ಜಾಲದಲ್ಲಿ ಕನ್ನಡ ಬಳಕೆಯನ್ನು ಹೆಚ್ಚಿಸುವ ಕುರಿತ ಚರ್ಚೆಗಳನ್ನು ನಡೆಸಲು ಪ್ರಾರಂಭಿಸಲಾಯಿತು. ಬಹುಜನರು ಕನ್ನಡವನ್ನು ಬರೆಯಲು ಅಥವಾ ಬಳಸಲು ಮುಂಜಾಗ್ರತೆಯಿಂದ ನಿರಾಕರಿಸಿದ್ದರೂ, ಅದು ಸಂಪೂರ್ಣತಃ ಮೌನವಾಗಿದ್ದುದಲ್ಲ. ಕನ್ನಡ ಬರವಣಿಗೆಯ ತಂತ್ರಜ್ಞಾನ ಕುರಿತ ಗೊಂದಲಗಳು, "ಸುಮ್ಮನೆ ಬರೆಯುವುದೇ ಯಾಕೆ?" ಎಂಬ ಮನೋಭಾವವೂ ಇದಕ್ಕೆ ಪ್ರಮುಖ ಕಾರಣವಾಗಿದೆ.

ಫೇಸ್‌ಬುಕ್ ಮತ್ತು ಇತರ ಸಾಮಾಜಿಕ ಜಾಲತಾಣಗಳು ವೇಗವಾಗಿ ಬೆಳೆಯುವುದರಿಂದ, ಜನರು ತಮ್ಮ ನುಡಿ–ಬರಹವನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳಲು ಹೆಚ್ಚು ಪ್ರೇರಿತರಾದರು. ಇದರ ಜೊತೆಗೆ, ಆಂಡ್ರಾಯ್ಡ್ ತಂತ್ರಜ್ಞಾನ ಮತ್ತು ನೂತನ ಮೊಬೈಲ್ ಸಾಧನಗಳ ಪರಿಚಯವು ಕನ್ನಡ ಬಳಕೆಯನ್ನು ಮತ್ತಷ್ಟು ಸುಲಭಗೊಳಿಸಿತು. ಈ ಬೆಳವಣಿಗೆ ಕನ್ನಡ ಬಳಕೆದಾರರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಫೇಸ್‌ಬುಕ್‌ನಲ್ಲಿ ಕನ್ನಡದ ಏಳಿಗೆಗೆ ಪ್ರಯತ್ನಿಸುತ್ತಿರುವ ಹಲವಾರು ಪುಟಗಳು ಹಾಗೂ ಬಳಕೆದಾರರನ್ನು ನೋಡಬಹುದು.

ಗಾಂಚಲಿ ಬಿಡಿ ಕನ್ನಡ ಮಾತಾಡಿ, ಪದಾರ್ಥ ಚಿಂತಾಮಣಿ ಮುಂತಾದ ಪುಟಗಳು ಕನ್ನಡ ಬರವಣಿಗೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತಿವೆ. ಕನ್ನಡ ಸಾಹಿತ್ಯ, ಕಥೆ, ಕವನ, ಕಾದಂಬರಿಗಳ ಹಳೆಯ ಅಮೂಲ್ಯ ಕೃತಿಗಳ ಕುರಿತು ಚರ್ಚೆ ಮಾಡುವ ಹಲವು ಪುಟಗಳು ಜಾಲತಾಣದಲ್ಲಿ ಲಭ್ಯವಿವೆ. ಜೊತೆಗೆ, ಹಲವಾರು ಹೊಸ ಕನ್ನಡ ಜಾಲತಾಣಗಳ ಉದಯವೂ ಗಮನಾರ್ಹವಾಗಿದೆ. ಹೊಸ ತಲೆಮಾರಿಗೆ ಸೇರಿದ ಯುವಕರು ಉತ್ಸಾಹಪೂರ್ವಕವಾಗಿ ಉತ್ತಮ ದರ್ಜೆಯ ವೆಬ್‌ಸೈಟ್‌ಗಳನ್ನು ಪ್ರಾರಂಭಿಸುತ್ತಿದ್ದಾರೆ. ರಾಜಕೀಯ, ಕ್ರೀಡೆ, ವಿಜ್ಞಾನ, ಕೃಷಿ ಮುಂತಾದ ವಿವಿಧ ಕ್ಷೇತ್ರಗಳನ್ನು ಒಳಗೊಂಡ ತಾಣಗಳು ಈಗ ಜಾಲತಾಣದಲ್ಲಿ ಸುಲಭವಾಗಿ ಲಭ್ಯವಾಗಿವೆ.

ಹೀಗಾಗಿ ಬಗೆ ಬಗೆಯ ಸುದ್ದಿಗಳು ಕನ್ನಡದಲ್ಲಿ ದೊರಕುವಂತಾಗಿದೆ. ನಮ್ಮ ನಡುವಿನ ಸಾಧಕರನ್ನು ವಿಶೇಷ ಪ್ರತಿಭೆ ಹೊಂದಿರುವ ಮಂದಿಯನ್ನು ಈ ತಾಣಗಳು ಜನರಿಗೆ ಪರಿಚಯಿಸುತ್ತಿವೆ. ದಿನಪತ್ರಿಕೆಗಳು, ಟಿವಿ ಮಾಧ್ಯಮಗಳಂತೆ ಇನ್ನೂ ಪ್ರಸಿದ್ಧಿಯನ್ನು

ಹೊಂದುವುದರಲ್ಲಿ ಯಾವುದೇ ಅನುಮಾನವಿಲ್ಲ. ಬೀಸಿ ಬರುವ ಗಾಳಿಯು ಪರಿಮಳದ ಜೊತೆಗೆ ಕೆಲಬಾರಿ ಗಣನೀಯವಾದ ಗಂಧವನ್ನು ತಂದಿತು. ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡದ ಬಳಕೆಯ ವಿಷಯದಲ್ಲೂ ಅದು ಹೊಸತಲ್ಲ. ಕನ್ನಡ ಭಾಷೆಯು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದ್ದು, ಅದರ ಶಾಸ್ತ್ರೀಯ ಅಡಿಪಾಯಗಳನ್ನು ಕಡೆಗಣಿಸಿ, ಡಿಜಿಟಲ್ ವೇದಿಕೆಗಳ ಸಹಾಯದಿಂದ ಹೊಸ ಅಭಿವ್ಯಕ್ತಿಗಳನ್ನು ಪರಿಚಯಿಸುವ ಪ್ರಯತ್ನಗಳು ನಡೆಯುತ್ತಿವೆ. ಮಹಾಪ್ರಾಣಗಳ ಕತ್ತರಿಸಿ ಸಂಸ್ಕೃತ ಮೂಲದ ಶಬ್ದಗಳನ್ನು ಕೊಂದು ಹೊಸ ಅರ್ಥಗಳನ್ನು ಹುಟ್ಟುಹಾಕುವ ಕೆಲಸಕ್ಕೆ ಇಲ್ಲೇ ಪ್ರಚಾರವು ದೊರಕುತ್ತಿದೆ.

ಕನ್ನಡ ಪುಟಗಳಲ್ಲಿ ಈಗಾಗಲೇ ಹಲವಾರು ಹೊಸ ಶಬ್ದಗಳು ಪ್ರವೇಶಿಸಿರುವುದನ್ನು ಗಮನಿಸಬಹುದು. ಜೊತೆಗೆ, ಕೆಲವು ಟ್ರೋಲ್ ಪುಟಗಳಲ್ಲಿ ಕೂಡ ಕನ್ನಡವನ್ನು ಬೆಳೆಯುವ ಪ್ರಯತ್ನಗಳು ಕಾಣಸಿಗುತ್ತವೆ. ಯಾವುದೇ ಭಾಷೆ ತನ್ನ ಮೂಲತತ್ತ್ವವನ್ನು ಉಳಿಸಿಕೊಂಡು, ಬದಲಾವಣೆಯನ್ನು ಅಳವಡಿಸಿಕೊಂಡಾಗ ಮಾತ್ರ ಏಳಿಕೆ ಸಾಧ್ಯವಾಗುತ್ತದೆ. ಕನ್ನಡವು ಈ ಹೊಸ ಯುಗದಲ್ಲಿ ಅಂತರ್ಜಾಲಕ್ಕೆ ತನ್ನ ಸ್ಥಾನವನ್ನು ಒಪ್ಪಿಸಿಕೊಂಡು ಮುನ್ನಡೆಸುತ್ತಿದ್ದು, ಡಿಜಿಟಲ್ ವೇದಿಕೆಗಳಲ್ಲಿ ಪ್ರಸ್ತುತ ಬೆಳವಣಿಗೆ ಸಾಧಿಸುತ್ತಿದೆ.

ಆದರೂ, ಭಾರತದ ಇತರೆ ಪ್ರಮುಖ ಪ್ರಾದೇಶಿಕ ಭಾಷೆಗಳಿಗೆ ಹೋಲಿಸಿದರೆ, ಕನ್ನಡದ ಬೆಳವಣಿಗೆ ಕೊಂಚ ನಿಧಾನವಾಗಿದೆ. ತಮಿಳು, ತೆಲುಗು, ಮಲಯಾಳಂ ಭಾಷೆಗಳ ಜಾಲತಾಣಗಳು ಮತ್ತು ಮೊಬೈಲ್ ಆಪ್‌ಗಳ ವಿಸ್ತಾರವನ್ನು ಗಮನಿಸಿದಾಗ, ಕನ್ನಡ ಇನ್ನೂ ಕಲಿಯಬೇಕಾದ ಹಲವು ಹಂತಗಳನ್ನು ಹೊಂದಿದೆ. ಇವುಗಳನ್ನು ಪರಿಶೀಲಿಸಿದಾಗ, ಭಾಷೆಯನ್ನು ಸಮರ್ಪಕವಾಗಿ ಬಳಸುವಲ್ಲಿ ಕನ್ನಡಿಗರು ಇನ್ನೂ ಹಿಂದೆಗಿರುವುದು ಕಂಡುಬರುತ್ತದೆ.

ಹೀಗಾಗಿ, ಭಾಷಾ ಪ್ರೇಮದ ವಿಷಯದಲ್ಲಿ ಕನ್ನಡಿಗರು ಸ್ವಲ್ಪ ಹಿಂಬಾಲಿಸುತ್ತಿದ್ದಾರೆ ಎಂಬ ಅಭಿಪ್ರಾಯ ಉಂಟಾಗುತ್ತದೆ. ಏನೇ ಆದರೂ, ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಕನ್ನಡಕ್ಕೆ ಹೊಸ ಆಯಾಮ ಸಿಕ್ಕಿದ್ದು, ಮುಂಬರುವ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡವನ್ನು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡು, ಭಾಷೆಯ ಬೆಳವಣಿಗೆಯನ್ನು ಸಾಧಿಸಲು ಮುಂದಿನ ಪೀಳಿಗೆಗೆ ನಮ್ಮದೇ ಆದ ಕೊಡುಗೆಯನ್ನು ನೀಡಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಧಾರವಾಡಕರ, ರಾ.ಯ. (2013). ಕನ್ನಡ ಭಾಷಾಶಾಸ್ತ್ರ. ಗೀತಾ ಬುಕ್ ಹೌಸ್.
- ಮುಗುಳಿ, ರಂ.ಶ್ರೀ. (2011). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್
- ಪ್ರಧಾನ ಗುರುದತ್ತ. (2014). ಆಡಳಿತ ಭಾಷೆ ಕೆಲವು ವಿಚಾರಗಳು. ಡಿ. ವಿ. ಕೆ ಮೂರ್ತಿ ಪ್ರಕಾಶನ
- ಶಾಮರಾಯ, ತ.ಸು. (2010). ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು.